175

ಡಾ: ಬಗಲಿ ಸಾರ್ವಭೌಮ ಸಾತಗೌಡ(ಇಂಡಿ)

ಶ್ರೀ ಗೋವಿಂದ ಎಂ.ಕಾರಜೋಳ(ಸಣ್ಣ ನೀರಾವರಿ, ಯೋಜನೆ ಹಾಗೂ ಸಾಂಖ್ಯಿಕ ಸಚಿವರು)

ಅ) ಇಂಡಿಯಲ್ಲಿ ಪುರಾತನ ಜಲದಪ್ಪನ ಕೆರೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಈ ಕೆರೆಯಲ್ಲಿ ಹೂಳು ತುಂಬಿದ್ದು ಈ ಕೆರೆಯನ್ನು ಸಾರ್ವಜನಿಕರು ಅತಿಕ್ರಮಣ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಜಲದಪ್ಪನ ಕೆರೆ ಇರುವುದು ಗಮನಕ್ಕೆ ಬಂದಿದೆ. ಈ ಕೆರೆಯನ್ನು ಅತಿಕ್ರಮಣ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲ.

ಆ) ಈ ಕೆರೆಯ ಹೂಳು ತೆಗೆದು ಅತಿಕ್ರಮಣವನ್ನು ತಡೆಹಿಡಿಯುವುದಕ್ಕೆ ಕ್ರಮ ಜರುಗಿಸಲಾಗುವುದೆ;

ಇ) ಹಾಗಿದ್ದಲ್ಲಿ, ಈ ಕಾರ್ಯಕ್ರಮ ಎಂದು ಪ್ರಾರಂಭಿಸಲಾಗುವುದು?

ಸದರಿ ಕೆರೆಯಲ್ಲಿನ ಹೂಳು ತೆಗೆಯುವ ಅಂಶವು ಸೇರಿದಂತೆ ಅದರ ಸುಧಾರಣೆಗಾಗಿ 2006–07ನೇ ಸಾಲಿನಲ್ಲಿ 25.00 ಲಕ್ಷ ಅಂದಾಜು ಮೊತ್ತದ ಕಾಮಗಾರಿಯನ್ನು ಕೈಗೊಳ್ಳಲಾಗಿದೆ. ಈ ಮೊತ್ತದಲ್ಲಿ ಹೂಳು ತೆಗೆಯಲು 6.42 ಲಕ್ಷ ಮೊತ್ತ ವೆಚ್ಚ ಮಾಡಿ ಸುಮಾರು 14,400 ಘನ ಮೀಟರ್‌ನಷ್ಟು ಹೂಳು ತೆಗೆಯಲಾಗಿದೆ. ಇನ್ನೂ ಸುಮಾರು 2000 ಘನ ಮೀಟರ್‌ನಷ್ಟು ಹೂಳು ತೆಗೆಯುವ ಕೆಲಸ ಬಾಕಿ ಇದ್ದು, ಅನುದಾನದ ಲಭ್ಯತೆಯ ಅನುಸಾರ ಈ ಕಾರ್ಯ ಕೈಗೊಳ್ಳಲಾಗುವುದು.

ಈ ಕೆರೆಯ ಅತಿಕ್ರಮಣವಾಗಿರುವ ಬಗ್ಗೆ ತಿಳಿಯಲು ಸರ್ವೆ ಕಾರ್ಯ ಕೈಗೊಳ್ಳಲಾಗುವುದು. ಅತಕ್ರಮಣವಾಗಿದ್ದಲ್ಲಿ ಅದರ ತೆರವಿಗೆ ಸೂಕ್ತ ಕ್ರಮ ಜರುಗಿಸಲಾಗುವುದು.

176 ಡಾ:ಬಗಲಿ ಸಾರ್ವಭೌಮ ಸಾತಗೌಡ

ಶ್ರೀ ಗೋವಿಂದ ಎಂ.ಕಾರಜೋಳ(ಸಣ್ಣ ನೀರಾವರಿ, ಯೋಜನೆ ಹಾಗೂ ಸಾಂಖ್ಯಿಕ ಸಚಿವರು)

ಅ) ಬಿಜಾಪೂರ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಜನಾಂಗದವರ ಜಮೀನುಗಳಿಗೆ ನೀರಾವರಿ ಸೌಲಭ್ಯ ಕಲ್ಪಿಸಲು ಎಷ್ಟು ಹಣ ನಿಗದಿಪಡಿಸಲಾಗಿದೆ;

2009–10ನೇ ಸಾಲಿನಲ್ಲಿ ರೂ.565.00ಲಕ್ಷ ಅಂದಾಜು ಮೊತ್ತದ 32 ಕಾಮಗಾರಿಗಳಿಗಾಗಿ ರೂ.169.50 ಲಕ್ಷ ಅನುದಾನ ಕಲ್ಪಿಸಲು ಪ್ರಸ್ತಾಪಿಸಲಾಗಿದೆ.

ಆ) ಈ ವರ್ಗದ ಜನರ ಅಭಿವೃದ್ಧಿ ಕಾರ್ಯಕ್ರಮಕ್ಕಾಗಿ ಇಂಡಿ ಮತಕ್ಷೇತ್ರಕ್ಕೆ ಎಷ್ಟು ಹಣ ಮೀಸಲಿಡಲಾಗಿದೆ.